40th Year of Publication. Phone: 3728.

ವಾರ್ಷಿಕ ಚಂದಾ ರೂ. 12—50.

ಪ್ರಭಾತ

ಬೆಲೆ 20 ಪೈಸೆ.

ಸಂಪುಟ: ೪೦. ಸಂಚಿಕೆ: ೪೪. | ಸಂಪಾದಕ: ಕುಡ್ಪಿ ವಾಸುದೇವ ಶೆಣೈ. ರವಿವಾರ ತಾ. 8—12—1974 | VOL. 40. No. 44.

ಧರ್ಮಸ್ಥಳ ಲಕ್ಷದೀಪೋತ್ಸವ

ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಶ್ರೀ ಮಂಜುನಾಥ ಸ್ವಾಮಿಯ ಲಕ್ಷದೀಪೋತ್ಸವದ ಅಂಗವಾಗಿ ನಡೆಯುವ ಸರ್ವಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳ 42 ನೆಯ ಅಧಿವೇಶನವು ಇದೇ ತಿಂಗಳ ತಾ. 12 ಮತ್ತು 13ರಂದು ನಡೆಯುವುದೆಂದು ತಿಳಿದುಬಂದಿದೆ. ಸರ್ವಧರ್ಮ ಸಮ್ಮೇಳನವನ್ನು ತಾ. 12ರಂದು ಬೆಂಗಳೂರು ವಿಶ್ವವಿದ್ಯಾನಿಲಯದ ಉಪ ಕುಲಪತಿ ಡಾ| ಎಚ್. ನರಸಿಂಹಯ್ಯನವರು ಉದ್ಘಾಟಿಸಲಿದ್ದು ಶ್ರೀ ದೇವೇಂದ್ರಕೀರ್ತಿ ಭಟ್ಟಾಚಾರ್ಯ ವರ್ಯ ಸ್ವಾಮೀಜಿ, ಹೊಂಬುಜ ಅವರು ಅಧ್ಯಕ್ಷತೆ ವಹಿಸಲಿರುವರು. ಪಂಡಿತ್ ಎಂ.ಪಿ. ಯೋಗಾನಂದ ಶಾಸ್ತ್ರಿ, ಶ್ರೀ| ಸಾದಿಖ್ ಬಿ. ಬಾಷಾಸಾಬ್, ದಾವಣಗೆರೆ, ಪ್ರೊ| ಪ್ರೇಮ ಕುಮಾರ, ಶ್ರೀ| ಬನ್ನಂಜೆ ಗೋವಿಂದಾಚಾರ್ಯ, ಶ್ರೀ| ಪದ್ಮರಾಜ ಹುನಗುಂದ ಮೊದಲಾದವರು ಉಪನ್ಯಾಸವೀಯಲಿರುವರು. ಸಾಹಿತ್ಯ ಸಮ್ಮೇಳನವನ್ನು ತಾ. 13ರಂದು ಕರ್ನಾಟಕ ವಿಶ್ವವಿದ್ಯಾನಿಲಯದ ಕುಲಪತಿ ಡಾ| ಆರ್. ಸಿ. ಹಿರೇಮಠ್ ಅವರು ಉದ್ಘಾಟಿಸಲಿದ್ದು ಶ್ರೀ| ದ. ರಾ. ಬೇಂದ್ರೆ ಅಧ್ಯಕ್ಷತೆವಹಿಸಲಿರುವರು. ಡಾ| ರಾ. ಯ. ಧಾರವಾಡಕರ್, ಶ್ರೀ| ಶುಭಚಂದ್ರ, ಶ್ರೀ| ಚಂದ್ರಶೇಖರ ಕಂಬಾರ, ಶ್ರೀ| ಎಂ. ರಾಮಚಂದ್ರ ಅವರು ಉಪನ್ಯಾಸವೀಯಲಿರುವರು.

ಪುರಸಭೆಯ ಬೇಡಿಕೆ

ದಕ್ಷಿಣಕನ್ನಡ ಜಿಲ್ಲೆಯಿಂದ ಸುಮಾರು 15 ಕೋಟಿ ರೂಪಾಯಿ ಸಾಮಾನ್ಯ ತೆರಿಗೆಯು ಸಂಗ್ರಹವಾಗುತ್ತಿದ್ದು ಈ ಪೈಕಿ ಕನಿಷ್ಠ ಶೇಕಡಾ 25ರಷ್ಟನ್ನಾದರೂ, ನಗರ ಸಭೆಗಳಿಗೆ ನೀಡಬೇಕೆಂದು ಮಂಗಳೂರು ನಗರಸಭಾಧ್ಯಕ್ಷ ಶ್ರೀ| ಬ್ಲೇಸಿಯಸ್ ಡಿ'ಸೋಜರು ಮಂಗಳೂರಿಗೆ ಬಂದಿದ್ದ ಪುರಸಭಾ ಆರ್ಥಿಕ ವಿಚಾರಣಾ ಸಮಿತಿಗೆ ಸಲಹೆ ಮಾಡಿರುವರು.

ಭೂಗತ ಚರಂಡಿಯೋಜನೆಯನ್ನು ನಗರಸಭೆ ವಹಿಸಿಕೊಳ್ಳಲಿ

ಸುಮಾರು ರೂ. 1·5ಕೋಟಿ ವೆಚ್ಚದ ಮಂಗಳೂರು ನಗರದ ಚರಂಡಿಯೋಜನೆಯನ್ನು ಮಂಗಳೂರು ನಗರಸಭೆಯೇ ತಕ್ಷಣ ವಹಿಸಿಕೊಳ್ಳುವಂತೆ, ರಾಜ್ಯಸರಕಾರದ ಲೋಕೋಪಯೋಗಿ ಸಚಿವ ಶ್ರೀ| ಎಚ್. ಎಂ. ಚೆನ್ನಬಸಪ್ಪನವರು ನಗರ ಸಭೆಗೆ ಆದೇಶಿಸಿರುವರೆಂದು ತಿಳಿದುಬಂದಿದೆ. ಆದರೆ, ಈ ಯೋಜನೆಯು ಕಾಮಗಾರಿಯಲ್ಲಿ ಕೆಲವಂಶ ಬಾಕಿಯಿರುವುದರಿಂದ, ಅದು ಕಾರ್ಯಗತವಾಗುವವರೆಗೆ ವಹಿಸಿಕೊಳ್ಳಲು ಅಸಾಧ್ಯವಾಗುವುದಾಗಿ ತಿಳಿಸಿದ ನಗರ ಸಭಾಧ್ಯಕ್ಷರು, ಈ ಕಾರ್ಯ ಪೂರ್ಣಗೊಳಿಸಲು ನಗರಸಭೆಗೆ 25 ಲಕ್ಷ ರೂಪಾಯಿ ಒದಗಿಸಿಕೊಡಬೇಕೆಂದು ಸಚಿವರೊಡನೆ ವಿನಂತಿಸಿಕೊಂಡಿರುವರು.

ಪುತ್ತೂರು ಪುರಸಭೆಯ ಚುನಾವಣಾ ಫಲಿತಾಂಶ

ಜನಸಂಘದ ಪ್ರಚಂಡ ವಿಜಯ!

ಹದಿನೈದು ಸದಸ್ಯರುಳ್ಳ ಪುತ್ತೂರು ಹೊಸ ಪುರಸಭೆಗೆ ತಾ. 1ರಂದು ನಡೆದ ಪ್ರಥಮ ಚುನಾವಣೆಯಲ್ಲಿ ಹನ್ನೆರಡು ಸ್ಥಾನಗಳನ್ನು ಗೆದ್ದು ಜನಸಂಘ ಪ್ರಚಂಡ ವಿಜಯ ಸಾಧಿಸಿದೆ. ಎಲ್ಲಾ ಸ್ಥಾನಗಳಿಗೂ ಸ್ಪರ್ಧಿಸಿದ ಕೊಂಗ್ರೆಸ್ ಪಕ್ಷವು ಕೇವಲ ಎರಡು ಸ್ಥಾನಗಳನ್ನು ಮಾತ್ರ ಗಳಿಸಲು ಶಕ್ತವಾಯಿತು. ಓರ್ವ ಪಕ್ಷಾತೀತ ಅಭ್ಯರ್ಥಿಯು ಗೆದ್ದಿದ್ದು, ಅವರು ಜನಸಂಘದಿಂದ ಬೆಂಬಲ ಪಡೆದಿದ್ದರು. 15 ಸ್ಥಾನಗಳಿಗೆ ಒಟ್ಟು 34 ಮಂದಿ ಸ್ಪರ್ಧಿಸಿದ್ದರು. ಒಟ್ಟು 8002 ಮತದಾರರಲ್ಲಿ 4663 ಮಂದಿ ಮತಚಲಾಯಿಸಿದ್ದರು. (ಶೇಕಡಾ ಪ್ರಮಾಣ 58.37)

ದಕ್ಷಿಣಕನ್ನಡದಿಂದ ಮತ್ತೋರ್ವ ಸಚಿವರು

ಇಬ್ಬರು ಹೊಸ ಸಹಾಯಕ ಸಚಿವರನ್ನು ಸಂಪುಟಕ್ಕೆ ಸೇರಿಸಿಕೊಳ್ಳುವುದಾಗಿ ಕರ್ನಾಟಕ ಸರಕಾರದ ಮುಖ್ಯಮಂತ್ರಿ ಶ್ರೀ| ದೇವರಾಜ್ ಅರಸ್ ಪ್ರಕಟಿಸಿದ್ದು, ಅವರಲ್ಲೊಬ್ಬರು ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್ ಕ್ಷೇತ್ರದ ಶ್ರೀ| ಬಿ. ಸುಬ್ಬಯ್ಯ ಶೆಟ್ಟಿಯವರಾಗಿರುತ್ತಾರೆ. 40 ವರ್ಷ ಪ್ರಾಯದ ಶ್ರೀ| ಸುಬ್ಬಯ್ಯ ಶೆಟ್ಟರು ವೃತ್ತಿಯಲ್ಲಿ ವಕೀಲರಾಗಿದ್ದು, ದ. ಕ. ಜಿಲ್ಲಾ ಕೊಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದವರಿರುತ್ತಾರೆ.

ಮಂಗಳೂರಲ್ಲಿ ಉಷ್ಣ ವಿದ್ಯುತ್ ಸ್ಥಾವರ

ಪ್ರಸ್ತುತ ಕಂಡುಬರುವ ವಿದ್ಯುತ್ ಅಭಾವ ಪರಿಸ್ಥಿತಿ ಹೋಗಲಾಡಿಸಲು ಮಂಗಳೂರು, ಬೆಂಗಳೂರು, ಮೈಸೂರು ಮತ್ತು ಹೊಸಪೇಟೆಗಳಲ್ಲಿ 200 ಮೇಗಾವಾಟ್‌ದಂತೆ ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ನಾಲ್ಕು ಉಷ್ಣ ವಿದ್ಯುತ್ ಸ್ಥಾವರಗಳ ನಿರ್ಮಾಣಕ್ಕೆ ರಾಜ್ಯ ಸರಕಾರ ಯೋಜಿಸಿದೆ ಎಂದು ಸಣ್ಣ ಕೈಗಾರಿಕೆಗಳ ಜೊಯಿಂಟ್ ಡೈರೆಕ್ಟರ್ ಶ್ರೀ| ಧರ್ಮೇಂದ್ರ ದೇವ್ ಅವರ ಮೂಲಕ ತಿಳಿದುಬರುತ್ತದೆ.

——

ಬೆಲೆಯೇರಿಕೆ ಭಯವಿಲ್ಲ ಕಲಬೆರಕೆಯ ಉಪದ್ರವವಿಲ್ಲ!

(ಕಿಟ್ಟಿ ಮೋತಿಜುಕಿ — ಜಪಾನೀ ಲೇಖಕರು)

ಸೋವಿಯೆತ್ ಒಕ್ಕೂಟದಲ್ಲಿ ರೆಸ್ಟೋರೆಂಟುಗಳಲ್ಲಿನ ಭೋಜನ ಬೆಲೆಗಳೂ ಸೇರಿದಂತೆ ಆಹಾರ ಧಾನ್ಯಗಳ ಚಿಲ್ಲರೆ ಬೆಲೆಗಳು 1960ರಿಂದ ಬಹುತೇಕವಾಗಿ ಒಂದೇ ಮಟ್ಟದಲ್ಲಿವೆ. ತಯಾರಿತ ಸಾಮಾನುಗಳ ಬೆಲೆಗಳಲ್ಲಿ ಇಳಿಮುಖ ಪ್ರವೃತ್ತಿ ಸ್ಪಷ್ಟವಾಗಿದೆ. ಬಟ್ಟೆಗಳ ಬೆಲೆ ಶೇ. 5ರಷ್ಟು, ಕೈಗಡಿಯಾರಗಳ ಬೆಲೆ ಶೇ. 30ರಷ್ಟು ಬೈಸಿಕಲ್ ಮತ್ತು ಮೋಟಾರ್ ಸೈಕಲ್ ಬೆಲೆಗಳು ಶೇ. 5ರಷ್ಟು ಕಡಮೆಯಾಗಿವೆ.

ಬಾಡಿಗೆಗಳಂತೂ ಇನ್ನಷ್ಟು ಸ್ಥಿರವಾಗಿವೆ (1928ರಿಂದ ಅವುಗಳಲ್ಲಿ ಬದಲಾವಣೆ ಆಗಿಲ್ಲ) ಸಾರಿಗೆ ದರಗಳು ಬಹುಕಾಲದಿಂದಲೂ ಅತ್ಯಂತ ಕಡಿಮೆ ಮಟ್ಟದಲ್ಲಿಯೆ ಇವೆ. ಐದು ಕೊಪೆಕ್‌ಗಳಿಂದ ನೀವು ಮೆಟ್ರೋ ರೈಲಿನ ಮೂಲಕ ನಗರದ ಯಾವುದೇ ಭಾಗಕ್ಕೂ ಹೋಗಬಹುದಾಗಿದೆ, ಬಸ್ ದರವು ಐದು ಕೋಪೆಕ್‌ಗಳಷ್ಟಿದ್ದು ಟ್ರಾಲಿ ಬಸ್ ದರ ನಾಲ್ಕು ಕೊಪೆಕ್‌ಗಳು ಮಾತ್ರವೆ. ವಿದ್ಯುಚ್ಛಕ್ತಿಯ ಹಾಗೂ ಅನಿಲ ದರಗಳು 25 ವರ್ಷಗಳಿಂದ ಇಲ್ಲಿಯವರೆಗೆ ಬದಲಾಗದೇ ಉಳಿದಿವೆ. ಬಾಡಿಗೆ ಮತ್ತು ಪೌರ ಸೇವೆಗಳ ವೆಚ್ಚವು ಕುಟುಂಬ ವರಮಾನದಲ್ಲಿ ಶೇ. 4ರಿಂದ 5ರಷ್ಟು ಮಾತ್ರವೆ ಆಗುತ್ತದೆ.

ಸಾಮೂಹಿಕ ಕೃಷಿ ಕ್ಷೇತ್ರ ಪೇಟೆಯ ಬೆಲೆಗಳು ರಾಜ್ಯದ ಬೆಲೆಗಳಿಗಿಂತ ಬೇರೆಯಾಗಿವೆ. ಅಲ್ಲಿ ಕೃಷಿಕರು ತಮ್ಮ ವೈಯುಕ್ತಿಕ ಜಮೀನು ತುಂಡಿನಲ್ಲಿ ಬೆಳೆದ ಉತ್ಪನ್ನಗಳನ್ನು ಹೆಚ್ಚು ಕಡಮೆ ದರಗಳಲ್ಲಿ ಮಾರಾಟ ಮಾಡುತ್ತಾರೆ. ಋತುಮಾನಗಳ ಬದಲಾವಣೆಗನುಗುಣವಾಗಿ ಅವುಗಳ ಬೆಲೆಗಳಲ್ಲಿ ಏರಿಳಿತಗಳುಂಟಾಗುತ್ತವೆ. (ಉದಾಹರಣೆಗೆ, ತರಕಾರಿ ಬೆಲೆಗಳು ಚಳಿಗಾಲದಲ್ಲಿ ಏರುತ್ತವೆ) ರಾಜ್ಯ ಅಂಗಡಿಗಳಲ್ಲಿ ಕಾಣುವುದಕ್ಕೆ ಮೊದಲೆ ಈ ಪೇಟೆಗಳಲ್ಲಿ ತರಕಾರಿ ಮತ್ತು ಹಣ್ಣು ಹಂಪಲುಗಳನ್ನು ಕಾಣಬಹುದಾಗಿದೆ, ಅದಕ್ಕಾಗಿಯೇ ಈ ಪೇಟೆಗಳು ಅತ್ಯಂತ ಜನಪ್ರಿಯವಾಗಿವೆ. (ಆದಾಗ್ಯೂ ದೇಶದ ಅತ್ಯಂತ ಒಟ್ಟು ಪೇಟೆವಹಿವಾಟಿನಲ್ಲಿ ಇವುಗಳ ಭಾಗ ಕೇವಲ ಶೇ. 2·4ರಷ್ಟು ಮಾತ್ರವೆ) ಪೇಟೆಗಳಲ್ಲಿ ಲಭ್ಯವಿರುವ ಸರಕುಗಳನ್ನೇ ಅಂಗಡಿಗಳ ಮೂಲಕ ದೊಡ್ಡ ಪ್ರಮಾಣದಲ್ಲಿ ಮಾರಾಟ ಮಾಡಲು ಪ್ರಾರಂಭಿಸಿದೊಡನೆಯೇ ಈ ಪೇಟೆಯ ಬೆಲೆಗಳು ಕುಸಿಯುತ್ತವೆ. ಹೀಗೆ ಪೇಟೆ ಬೆಲೆಗಳ ಮೇಲೆ ರಾಜ್ಯ ವಾಣಿಜ್ಯವು ತನ್ನ ಪ್ರಭಾವವನ್ನು ಬೀರುತ್ತದೆ ಮತ್ತು ಅವುಗಳನ್ನು ಪರೋಕ್ಷವಾಗಿ ಕ್ರಮಪಡಿಸುತ್ತದೆ.

ಸಾಂಸ್ಕೃತಿಕ ಉದ್ದೇಶಗಳಿಗೆ ಬಳಸಲಾಗುವ ಸಾಮಾನುಗಳ, ಬಳಕೆ ವಸ್ತುಗಳ, ಹಾಗೂ ಮೂಲ ಆಹಾರ ಪದಾರ್ಥಗಳು ಬೆಲೆಗಳು ಅತ್ಯಂತ ಕಡಮೆಯಾಗಿರುವುದು, ಸಮಾಜವಾದಿ ಸಮಾಜದ ಮುಖ್ಯ ಲಕ್ಷಣಗಳಲ್ಲೊಂದು. ಇಂಥ ಸಮಾಜವು ಪ್ರಾಥಮಿಕವಾಗಿ ಸಾಮಾನ್ಯ ಜನತೆಯ ಅವಶ್ಯಕತೆಯನ್ನು ಪೂರೈಸುವ ಕಡೆಗೆ ಹಾಗೂ ಜೀವನಾವಶ್ಯಕ ವಸ್ತುಗಳಿಗೆ ಸಂಬಂಧಿಸಿದಂತೆ ಎಲ್ಲರಿಗೂ ಸರಿಸಮಾನವಾದ ಅವಕಾಶಗಳನ್ನು ಒದಗಿಸುವುದರ ಕಡೆಗೆ ಗಮನ ನೀಡುತ್ತದೆ. ಬಾಡಿಗೆಗಳು, ಸಾರಿಗೆ ದರಗಳು ಹಾಗೂ ಪೌರ ಸೇವೆಗಳು ಅಗ್ಗದರದಲ್ಲಿವೆ ಮಾತ್ರವೇ ಅಲ್ಲ, ಚಲಚ್ಚಿತ್ರ ಮತ್ತು ನಾಟಕ ಮಂದಿರಗಳ ಪ್ರವೇಶ ಶುಲ್ಕಗಳೂ ಕಡಿಮೆಯ ಇವೆ. ಪುಸ್ತಕ, ರೆಕಾರ್ಡುಗಳು, ಮಕ್ಕಳಿಗಾಗಿ ಇರುವ ಎಲ್ಲ ಮಾದರಿ ಸಾಮಾನುಗಳು ಅತ್ಯಂತ ಕಡಮೆ ಬೆಲೆಗಳಲ್ಲಿ ದೊರೆಯುತ್ತವೆ. ಸೋವಿಯೆತ್ ಒಕ್ಕೂಟದಲ್ಲಿ ಪೆಟ್ರೋಲ್ ಬೆಲೆಯು ಜಪಾನ್‌ಗಿಂತಲೂ ಐದು ಪಾಲು ಕಡಮೆಯಿದೆ.

ನಾನು ಒತ್ತಿ ಹೇಳಬೇಕಾಗಿರುವ ಇನ್ನೂ ಒಂದು ಸಂಗತಿ ಇದೆ. ಅದೆಂದರೆ: ನನ್ನ ಸಹೋದ್ಯೋಗಿಯೂ ಜಪಾನಿನ ವಿಜ್ಞಾನಿಯೂ ಆಗಿರುವ ಅವರು ಒಂದು ವರ್ಷದ ಹಿಂದೆ ಇದನ್ನು ಬಹುವಾಗಿ ಶ್ಲಾಘಿಸುತ್ತ "ಸುರಕ್ಷಿತ ಆಹಾರವನ್ನೇ ಸೇವಿಸು" ಎಂಬ ಜಪಾನಿನ ಆದರ್ಶ ವಾಕ್ಯವನ್ನು ಸೋವಿಯೆತ್ ಒಕ್ಕೂಟದಲ್ಲಿ ಜಾರಿಗೆ ತರುವುದು ಅತ್ಯಂತ ಸುಲಭಸಾಧ್ಯವೆಂದಿದ್ದರು. ಸೋವಿಯೆತ್ ವಾಣಿಜ್ಯ ಜಾಲಬಂಧದಲ್ಲಿ ಅಸಂಬದ್ಧ ಸಾರೀಕೃತ ಆಹಾರಗಳ ಬಳಕೆ ವಿಪರೀತವಾಗಿಲ್ಲ. ಇಲ್ಲಿಯ ಜನರು ತಾಜಾ ಮತ್ತು ಸಹಜವಾದ ಆಹಾರವನ್ನೇ ಸೇವಿಸುತ್ತಾರೆ; ಅಪಾಯಕಾರಿ ಕಲಬೆರಕೆಗಳ ಬಗ್ಗೆ ಅವರು ಭಯಪಡಬೇಕಾದುದೇ ಇಲ್ಲ. ದಪ್ಪ ಹಾಲೇ ದೊರೆಯುತ್ತದೆ ಮತ್ತು ಇತರ ಪದಾರ್ಥಗಳು ಹಿತಕರವಾದ ಸಹಜ ಸ್ವಾದದಿಂದ ಕೂಡಿರುತ್ತವೆ. ಅಂಗಡಿಗಳು, ಜೇನು, ಅಣಬೆ, ಉಪ್ಪಿನಕಾಯಿ, ಸಹಜರುಚಿ ಹೊಂದಿರುವ ಮಾಂಸಜನ್ಯ ಪದಾರ್ಥ ಮೊದಲಾದ "ಪ್ರಕೃತಿದತ್ತ ಕೊಡುಗೆ"ಗಳನ್ನು ಮಾರಾಟ ಮಾಡುತ್ತವೆ.

ಉಜ್ವಲವಾದ ಮತ್ತು ನಾನಾ ಬಗೆಯ ಬಟ್ಟೆಗಳಂತೂ ಈಗ ಅಧಿಕಾಧಿಕವಾಗಿ ಬಳಸಲ್ಪಡುತ್ತಿವೆ. ಬಳಕೆ ವಸ್ತುಗಳನ್ನು ಉತ್ಪಾದಿಸುವ ಉದ್ದಿಮೆಯಂತೂ ಈಗ ಅತ್ಯಂತ ತ್ವರಿತ ಗತಿಯಲ್ಲಿ ಅಭಿವೃದ್ಧಿಗೊಳ್ಳುತ್ತಿದೆ. ಕ್ರಮಬದ್ಧವಾದ ಅಂಕೆಸಂಖ್ಯಾ ವರದಿಗಳಿಂದಲೇ ಇದು ವಿದಿತವಾಗುತ್ತದೆ. ಉದಾಹರಣೆಗೆ, ರಾಸಾಯನಿಕ ಕೈಗಾರಿಕೆಯಲ್ಲಿ ಬಳಕೆಯ ಸರಕುಗಳ ಉತ್ಪಾದನೆಯು 1960ರಿಂದ ಮೂರು ಪಾಲು ಹೆಚ್ಚುಗೊಂಡಿದೆ. ಸೋವಿಯೆತ್ ಜನರ ವರಮಾನಗಳೂ ತ್ವರಿತವಾಗಿ ಬೆಳೆಯುತ್ತಿವೆ. ಗಳಿಕೆಗಳಲ್ಲಿ, ಪಿಂಚಣಿ ಮತ್ತು ವಿದ್ಯಾರ್ಥಿಗಳ ಸಹಾಯಧನದಲ್ಲಿಯೂ ಹೆಚ್ಚಳವಾಗುತ್ತಿದೆ; ಮತ್ತು ರಾಜ್ಯದಿಂದ ಜನರು ಪಡೆಯುವ ಸೌಲಭ್ಯಗಳ ಪ್ರಮಾಣವೂ ಏರುತ್ತಿದೆ.

(ಈ ಲೇಖನವನ್ನು ಪ್ರಸ್ತುತ ಲೇಖಕರ ಆಕಾಶವಾಣಿ ಭಾಷಣದಿಂದ ಕೊಡಲಾಗಿದೆ.)

———

ಸ್ಟೇಡಿಯಮ್ ಸಮಿತಿ ಸಭೆ

ಮಂಗಳೂರು ಉರ್ವಾ ಮೈದಾನಿನಲ್ಲಿ ನಿರ್ಮಾಣಮಾಡಲು ಪ್ರಸ್ತಾಪಿಸಲ್ಪಟ್ಟ ಮಂಗಳೂರು ವಿವಿಧೋದ್ದೇಶ ಸ್ಟೇಡಿಯಮ್ ಸಮಿತಿಯ ಸಭೆಯು ತಾ. 6 ರಂದು ಬೆಳಿಗ್ಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ದ. ಕ. ಜಿಲ್ಲಾಧಿಕಾರಿ ಶ್ರೀ| ಎಸ್. ಬಿ. ಮುದ್ದಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದಾಗ ಸ್ಟೇಡಿಯಮ್ ನಿರ್ಮಾಣದ ಬಗ್ಗೆ ಧನ ಸಂಗ್ರಹವು ಶೀಘ್ರವಾಗಿ ನಡೆಯಬೇಕೆಂದು ನುಡಿದ ಅಧ್ಯಕ್ಷರು ಇದಕ್ಕೆ ಸೂಕ್ತ ಸಲಹೆಗಳನ್ನಿತ್ತರು.

ಸಹಕಾರಿ ಕಾರ್ಯಕರ್ತರ ನಿಧನ

ಸಹಕಾರ ಇಲಾಖೆಯಲ್ಲಿ ಬೇರೆ ಬೇರೆ ಹುದ್ದೆಗಳನ್ನುನೋಡಿಕೊಂಡು ಸುಮಾರು 30 ವರ್ಷಗಳ ದೀರ್ಘ ಸೇವೆ ಸಲ್ಲಿಸಿ ಕಳೆದ ಮಾರ್ಚ್ 31ರಂದು ಮಂಗಳೂರಿನ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಕಾರ್ಯ ನಿರ್ವಹಣಾಧಿಕಾರಿಯಾಗಿ ನಿವೃತ್ತರಾದ ಶ್ರೀ| ಎನ್. ವೆಂಕಪ್ಪ ರೈ ಅವರು ಬೆಳ್ಳಿಪಾಡಿಯ ಸ್ವಗೃಹದಲ್ಲಿ ಇತ್ತೀಚೆಗೆ ತಮ್ಮ 55ನೇ ವರ್ಷಪ್ರಾಯದಲ್ಲಿ ನಿಧನರಾದರು.

——

ಶ್ರೀಮದ್ಭಗವದ್ಗೀತೆ

(ಕಳೆದ ಸಂಚಿಕೆಯಿಂದ ಮುಂದುವರಿದುದು)

(ಮೂಲ ಸಂಸ್ಕೃತದಲ್ಲಿ ಮತ್ತು, ತುಳುಭಾಷೆಯಲ್ಲಿ)

(ತುಳುಗೀತೆ ರಚಯಿತರು: ದಿ| ಮೂಲ್ಕಿ ನರಸಿಂಗರಾವ್, ಬಿ. ಎ., ಎಮ್. ಎಲ್.)

ಹದಿನಾರನೆಯ ಅಧ್ಯಾಯ—ದೈವಾಸುರ ಸಂಪದ್ವಿಭಾಗಯೋಗ

ಸಂಸ್ಕೃತ

ದ್ವೌ ಭೂತಸರ್ಗೌ ಲೋಕೇಽಸ್ಮಿನ್ದೈವ ಆಸುರ ಏವ ಚ ।
ದೈವೋ ವಿಸ್ತರಶಃ ಪ್ರೋಕ್ತ ಆಸುರಂ ಪಾರ್ಥ ಮೇಶೃಣು ॥ ೬ ॥

ಪ್ರವೃತ್ತಿಂ ಚ ನಿವೃತ್ತಿಂ ಚ ಜನಾ ನ ವಿದುರಾಸುರಾಃ ।
ನ ಶೌಚಂ ನಾಪಿ ಚಾಽಽಚಾರೋ ನ ಸತ್ಯಂ ತೇಷು ವಿದ್ಯತೇ ॥ ೭ ॥

ಅಸತ್ಯಮಪ್ರತಿಷ್ಠಂ ತೇ ಜಗದಾಹುರನೀಶ್ವರಂ ।
ಅಪರಸ್ಪರ ಸಂಭೂತಂ ಕಿಮನ್ಯತ್ಕಾಮಹೈತುಕಂ ॥ ೮ ॥

ಏತಾಂ ದೃಷ್ಟಿಮವಷ್ಟಭ್ಯ ನಷ್ಟಾತ್ಮಾನೋಽಲ್ಪಬುದ್ಧಯಃ ।
ಪ್ರಭವಂತ್ಯುಗ್ರ ಕರ್ಮಾಣಃ ಕ್ಷಯಾಯ ಜಗತೋಽಹಿತಾಃ ॥ ೯ ॥

ಕಾಮಮಾಶ್ರಿತ್ಯ ದುಷ್ಪೂರಂ ದಂಭಮಾನಮದಾನ್ವಿತಾಃ ।
ಮೋಹಾದ್ಗೃಹೀತ್ವಾಽಸದ್ಗ್ರಾಹಾನ್ಪ್ರವರ್ತಂತೇಽಶುಚಿವ್ರತಾಃ ॥ ೧೦ ॥

ಪದಿನಾಜನೆ ಅಧ್ಯಾಯ—ದೇವಾಸುರ ಸಂಪದ್ವಿಭಾಗ ಯೋಗೊ

ತುಳು

ರಡ್ಡ್ ವಿಧತಾ ಪ್ರಾಣಿಳುಪ್ಪೆರ್—ಆಸುರಲ ದೈವೀಕಲಾ ।
ವಿಸ್ತರೊಟ್ ದೈವೀಕ ಪಣ್ಯೆ, ಪಣ್ಪೆ ಆಸುರಿ ಕೇಣ್‌ಲಾ ॥ ೬ ॥

ತೆರುಜಿ ಆಸುರಿಳೇಕ್ ಪ್ರವೃತ್ತಿ ನಿವೃತ್ತಿತಾ ಗುಣಭೇದೊನೇ ।
ಶೌಚಆಚಾರೊಕುಳು ತೆರುಜೀ, ತೆರುಜಿ ಆಕ್ಲೆಗ್ ಸತ್ಯನೇ ॥ ೭ ॥

'ಸತ್ಯ ಇಜ್ಜಿ, ಪ್ರತಿಷ್ಠೆ ಇಜ್ಜೀ, ದೇವೆರಿಜ್ಜಿ ಜಗತ್ತ್‌ಗ್; ।
ಪುಟ್ಟಿನವ್ವು ಪರಸ್ಪರತ ಸಂಯೋಗ ಕಾಮಟ್ ಸತ್ಯೋಕ್ ॥ ೮ ॥

ಇಂಚ ದೃಷ್ಟಿನ್ ದೀತ್ ನಡಪೆರ್ ಅಲ್ಪಬುದ್ಧಿತಾ ಆ ಜನಾ ।
ಆತ್ಮನಷ್ಟೆರ್, ಉಗ್ರಕರ್ಮೆರ್, ಮುಳ್ತ್ ಜಗತ್ತ ನಾಶನಾ ॥ ೯ ॥

ಮುಳ್ತ್ ಕಠಿನತ ಕಾಮತಾಶ್ರಯ, ಡಂಭಮಾನಮದಾನ್ವಿತೇರ್ ।
ಅಸದ್ಭಾವನೆ ಆತ್ ಮೋಹಟ್ ನಡಪೆರಾ ಅಶುಚಿವ್ರತೇರ್ ॥ ೧೦ ॥

(ಮುಂದುವರಿಯುವುದು)

ಈ ವಾರದ ಭವಿಷ್ಯ

(ಎಸ್. ಸುಬ್ರಾಯನ್)

ತಾ.8-12-74ರಿಂದ 14-12-1974ರ ವರೆಗೆ

ಮೇಷ:

ನೀವು ನಿಮ್ಮ ತೊಡಕಿನ ಸಮಸ್ಯೆಯನ್ನು ಬಗೆಹರಿಸಲಿರುವ ಪ್ರಯತ್ನವನ್ನು ಸಾಧಿಸುವಿರಿ. ಅದರಿಂದ ಪ್ರಗತಿಯ ಹೆಜ್ಜೆಯು ಕಂಡುಬರುವುದು. ಬಂಧುಜನರ ಕೂಡಿಕೆ ಶುಭಸಂಘಟನೆಗಳಿಗೆ ಅವಕಾಶವು ಕಾಣಬರುತ್ತಿರುವುದು. ಕುಟುಂಬ ಶುಭ ಘಟನೆಗಳು ನಡೆಯಲಿರುತ್ತವೆ. ಪ್ರವಾಸಕ್ಕಿರುವ ಸಂಪರ್ಕವಿದೆ.

ವೃಷಭ:

ಹಲವಾರು ವಿಚಾರಗಳಿಂದ ಕೂಡಿದವರಾಗಿ ಕಾಣಬರುವಿರಿ. ರಿಕಾರ್ಡು ವ್ಯವಹಾರಗಳು ಮುಂದುವರಿಯುವವು. ದೇಹಾರೋಗ್ಯದ ನೆಲೆ ಚೆನ್ನಾಗಿರುವುದಿಲ್ಲ. ವಾಸಸ್ಥಾನದ ಬದಲಾವಣೆಗಿರುವ ಸಂಪರ್ಕವು ಕಂಡುಬರುವುದಾಗಿದೆ. ದೂರಗತ ಬಂಧುಜನರ ಭೇಟಿಯನ್ನು ಹೊಂದಲಿರುವಿರಿ.

ಮಿಥುನ:

ಸಾಮಾಜಿಕ ವಿಷಯದಲ್ಲಿ ಆಸಕ್ತಿಯನ್ನು ಹೊಂದಿದವರಾಗಿರುವಿರಿ. ಆಕಸ್ಮಿಕ ಘಟನೆಗಳು ಕಂಡುಬರುವವು. ರಿಕಾರ್ಡು ವ್ಯವಹಾರಗಳು ಮುಂದುವರಿಯುವವು. ಕುಟುಂಬದಲ್ಲಿ ಶುಭಕೆಲಸಗಳಿಗಿರುವ ಸಂಘಟನೆ ಇರುತ್ತದೆ. ನೌಕರರು ಸ್ಥಾನಾಂತರವನ್ನು ಹೊಂದಲಿರುವರು.

ಕರ್ಕಟಕ:

ಭಿನ್ನ ಭಿನ್ನ ವಿಚಾರ ಧೋರಣೆಗಳಿಂದ ಕೂಡಿದವರಾಗಿ ಕಾಣಬರುವಿರಿ. ಬಂಧುಜನರ ವಿಯೋಗಕ್ಕಿರುವ ಅವಕಾಶವು ಕಾಣಬರುವುದು. ಪತ್ರವ್ಯವಹಾರಗಳು ನಡೆಯಲಿರುತ್ತವೆ. ವಿದ್ಯಾಜೀವನದವರು ಅಭಿವೃದ್ಧಿಯನ್ನು ಹೊಂದಲಿರುವರು. ಪ್ರವಾಸಾಸಕ್ತರಾಗಿ ಕಂಡುಬರುವಿರಿ.

ಸಿಂಹ:

ನಿಮ್ಮ ಕೆಲಸಗಳು ಬಹುವಾಗಿದ್ದು ವಿರಾಮ ಕಡಮೆಯಾಗಿರುತ್ತದೆ. ಮಾನಸಿಕ ಶಾಂತಿಯು ಕೌಟುಂಬಿಕ ವಾತಾವರಣದಲ್ಲಿ ಕಡಮೆಯಾಗಿರುತ್ತದೆ. ಹಿಡಿದ ಕೆಲಸಗಳು ಸಾವಕಾಶವಾಗಿ ಕೊನೆಗೊಳ್ಳುತ್ತವೆ. ವ್ಯಾಪಾರಿಗಳು ಪ್ರಗತಿಯಿಂದ ಕೂಡಿದವರಾಗುವರು.

ಕನ್ಯಾ:

ಸಾಮಾಜಿಕ ವಿಷಯದಲ್ಲಿ ಆಸಕ್ತಿ ಕಂಡುಬರುವುದು. ಬಂಧು ಜನರ ವಿಯೋಗವನ್ನು ಹೊಂದಲಿರುವಿರಿ. ಧಾರ್ಮಿಕ ವಿಷಯಗಳಲ್ಲಿ ಅಸಕ್ತರಾಗಿ ಕಾಣಬರುವಿರಿ. ವಿದ್ಯಾಜೀವನದವರು ಪ್ರಗತಿಯಿಂದ ಕೂಡಿದವರಾಗುವರು. ನೌಕರರು ಸ್ಥಾನಾಂತರವನ್ನು ಹೊಂದಲಿರುವರು.

ತುಲಾ:

ಹಲವಾರು ಎಡರು ತೊಡರುಗಳು ಕಂಡುಬಂದರೂ ನಿಮ್ಮ ಕೆಲಸವನ್ನು ಸಾಧಿಸಲಿರುವ ವ್ಯವಸಾಯಗೊಂಡವರಾಗುವಿರಿ. ದೂರಗತ ಬಂಧುಜನರ ಸುಖವಾರ್ತೆಯನ್ನು ಹೊಂದಲಿರುವಿರಿ. ರಿಕಾರ್ಡು ವ್ಯವಹಾರಗಳು ಸಾವಕಾಶಗೊಳ್ಳುತ್ತವೆ. ನೌಕರರಿಗೆ ಸ್ಥಾನಾಂತರ ಯೋಗವಿದೆ.

ವೃಶ್ಚಿಕ:

ನಿಮ್ಮ ಮನಸ್ಸು ಶಾಂತಿಯಿಂದ ಕೂಡಿರುವುದು. ಹೊಸ ವ್ಯವಸಾಯದಿಂದ ಕೂಡಿದವರಾಗಿರುವಿರಿ. ಧಾರ್ಮಿಕ ವಿಷಯದಲ್ಲಿ ಆಸಕ್ತಿಯನ್ನು ಹೊಂದಿದವರಾಗುವಿರಿ. ಕುಟುಂಬದಲ್ಲಿ ಶುಭಕೆಲಸಗಳಿಗಾಗಿರುವ ಸಂಘಟನೆಯಾಗುತ್ತಿರುವುದು. ವಿದ್ಯಾಜೀವನದವರು ಅಭಿವೃದ್ಧಿಯನ್ನು ಹೊಂದಲಿರುವ ಯೋಗವಿರುತ್ತದೆ.

ಧನು:

ನಿರಂತರ ಬೇರೆ ಬೇರೆ ವಿಚಾರಗಳಿಂದ ಕೂಡಿದವರಾಗುವಿರಿ. ಕುಟುಂಬದ ವಾತಾವರಣದಲ್ಲಿ ನವೀನತೆಯು ಕಂಡುಬರುವುದಾಗಿದೆ. ಹೊಸ ರಿಕಾರ್ಡು ವ್ಯವಹಾರಗಳು ನಡೆಯಲಿರುತ್ತವೆ. ವ್ಯಾಪಾರಿಗಳು ಪ್ರಗತಿ ಹೊಂದಲಿರುವರು.

ಮಕರ:

ಎಲ್ಲ ಕೆಲಸಗಳೂ ಸಾವಕಾಶಗೊಳ್ಳುತ್ತವೆ ಧಾರ್ಮಿಕ ವಿಷಯಗಳಲ್ಲಿ ಆಸಕ್ತರಾಗಲಿರುವಿರಿ. ಕೌಟುಂಬಿಕದ ನೆಲೆಯು ಚೆನಾಗಿರುವುದಿಲ್ಲ. ವಿದ್ಯಾ ಜೀವನದವರು ಉನ್ನತಿಯನ್ನು ಹೊಂದಲಿರುವ ಸಂಘಟನೆ ಕಂಡುಬರುವುದು. ಪ್ರವಾಸವಿರುತ್ತದೆ.

ಕುಂಭ:

ಸಾಮಾಜಿಕದಲ್ಲಿ ಆಸಕ್ತಿಯನ್ನು ಹೊಂದಿದವರಾಗುವಿರಿ. ದೊಡ್ಡ ದೊಡ್ಡ ಆಶಾಕಲ್ಪನೆಗಳಿಂದ ಕೂಡಿ ಅದಕ್ಕಿರುವ ಶ್ರಮಯುಕ್ತರಾಗುವಿರಿ. ನೌಕರರು ಕೆಲಸದಲ್ಲಿ ಅಭಿವೃದ್ಧಿಯನ್ನು ಹೊಂದಲಿರುವರು. ಆಕಸ್ಮಿಕ ಘಟನೆಗಳಿಂದ ಕೂಡಿದವರಾಗಿ ಕಂಡುಬರುವಿರಿ.

ಮೀನ:

ಎಲ್ಲ ಕೆಲಸಗಳೂ ಸಾವಕಾಶವಾಗಿ ಜಯಗೊಳ್ಳುವವು. ಸಂಪತ್ತಿನ ಪ್ರಗತಿಯನ್ನು ಸಾಧಿಸಲಿರುವಿರಿ. ಕುಟುಂಬದಲ್ಲಿ ಶುಭಘಟನೆಗಳಿರುತ್ತವೆ. ಆಕಸ್ಮಿಕ ಘಟನೆಯಿಂದ ಕೂಡಿದವರಾಗಿ ಕಾಣಬರುವಿರಿ. ನೌಕರರಿಗೆ ಸ್ಥಾನಾಂತರಾವಕಾಶವಿದೆ.

—

ಮಲೆನಾಡು ಅಭಿವೃದ್ಧಿ ಯೋಜನೆ

ಕರ್ನಾಟಕದ ಪಶ್ಚಿಮ ಘಟ್ಟ ಪ್ರದೇಶದ ಪ್ರಗತಿ ಬಗ್ಗೆ ಸರಕಾರ ಈಗಾಗಲೇ ಒಂದು ಯೋಜನೆ ತಯಾರಿಸಿದ್ದು, ರೂ. 7 ಕೋಟಿ ವಿನಿಯೋಗಿಸಿ ಮಲೆನಾಡು ವಲಯದಲ್ಲಿ ಕೃಷಿ, ತೋಟಗಾರಿಕೆ, ಪ್ರಾಣಿ ಸಂಗೋಪನೆ ಮತ್ತು ಸಣ್ಣ ಕೈಗಾರಿಕೆಗಳ ಸಮಗ್ರ ಅಭಿವೃದ್ಧಿಯನ್ನು ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಸಾಧಿಸಲಾಗುವುದು. ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ, ಉಡುಪಿ, ಕಾರ್ಕಳ, ಬೆಳ್ತಂಗಡಿ ಮತ್ತು ಸುಳ್ಯಗಳು ಈ ಕಾರ್ಯಕ್ರಮ ಕ್ಕೊಳಗಾಗುವುವು.

ಭೂಮಿಯ ಅತ್ಯಂತ ಪುರಾತನ ಶಿಲೆಗಳ ಅಧ್ಯಯನ

ಕರ್ನಾಟಕಕ್ಕೆ ಬ್ರಿಟಿಷ್ ಭೂಗೋಲ ತಜ್ಞರ ಭೇಟಿ

ಭೂಮಿಯ ಅತ್ಯಂತ ಪುರಾತನ ಶಿಲೆಗಳ ಅಧ್ಯಯನಕ್ಕಾಗಿ, ಬ್ರಿಟ್ಟನಿನ ಭೂರಚನಾ ಶಾಸ್ತ್ರಜ್ಞ ಪ್ರೊ! ರೊಬರ್ಟ್ ಎಮ್. ಶೆಕ್ಲ್‌ಟನ್‌ರವರು ಮುಂದಿನವಾರ ಕರ್ನಾಟಕಕ್ಕೆ ಆಗಮಿಸಿ, ಇಲ್ಲಿ ಎರಡು ವಾರಗಳ ತನಕ ಇರುವರು. "ಬ್ಲೂ ಶಿಸ್ಟ್ಸ್" ಎಂದು ಕರೆಯಲ್ಪಡುವ ಶಿಲೆಯ ವಿಷಯ ಇವರು ಅಧ್ಯಯನ ನಡೆಸುವರು. ಈ ವಿಶಿಷ್ಟ ಶಿಲೆಯು ಕೆಲವು ವರ್ಷಗಳ ಹಿಂದೆ, ಭಾರತೀಯ ಭೂವಿಜ್ಞಾನಿ ಡಾ! ಎಸ್. ವರದರಾಜನ್ ಎಂಬವರಿಂದ ಸಂಶೋಧಿಸಲ್ಪಟ್ಟಿತ್ತು. ಇತ್ತೀಚೆಗೆ, ಭೂಮಿಯ ರಚನೆಯ ಬಗ್ಗೆ ಹೊಸ ವಿಚಾರಗಳೂ ಕಲ್ಪನೆಯೂ ಪ್ರಕಟವಾಗಿದ್ದು, ಈ ನೀಲ ಶಿಲೆ "ಬ್ಲೂ ಶಿಸ್ಟ್" ಪ್ರಾಮುಖ್ಯತೆ ಪಡೆದಿದೆ.

ಪ್ರೊಫೆಸರ್ ಶೆಕ್ಲ್‌ಟನ್‌ರವರು ಇದೀಗ ಪ್ರಥಮಬಾರಿ ಭಾರತವನ್ನು ಸಂದರ್ಶಿಸುವುದಾಗಿದೆ. ದಶಂಬರ ತಾ. 26ರಲ್ಲಿ ಶೆಕ್ಲ್‌ಟನ್‌ರವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಭಾಷಣ ಮಾಡಲಿರುವರು. ತಮ್ಮ ಪ್ರವಾಸದಲ್ಲಿ ಭಾರತದ ಭೂಗರ್ಭ ಶಾಸ್ತ್ರಜ್ಞರನ್ನೂ ಭೇಟಿಯಾಗುವರು.

———

ಸಂಸ್ಥಾ ಕೊಂಗ್ರೆಸ್ ಜಿಲ್ಲಾ ರಾಜಕೀಯ ಪರಿಷತ್ತು

ನಾಗರಿಕರ ಮೂಲಭೂತ ಹಕ್ಕುಬಾಧ್ಯತೆಗಳಿಗೆ ಇದೀಗ ಧಕ್ಕೆಬರುವ ಪರಿಸ್ಥಿತಿಯುಂಟಾಗಿದ್ದು, ಆ ಹಕ್ಕುಗಳು ಉಳಿಯದಿದ್ದಲ್ಲಿ ಪ್ರಜಾಪ್ರಭುತ್ವದ ಅಳಿವಿಗೆ ಕಾರಣವಾಗಬಹುದಾದುದರಿಂದ ಜನಜಾಗ್ರತಿಯೊಂದಿಗೆ ಅದನ್ನು ಉಳಿಸಲು ಸರ್ವಯತ್ನ ನಡೆಸಬೇಕೆಂದು, ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನ (ಬಂಟರ ಯಾನೆ ನಾಡವರ ಹೊಸ್ಟೆಲ್)ದಲ್ಲಿ ಕಳೆದ (ತಾ. 1-12-74) ದ. ಕ. ಜಿಲ್ಲಾ ಸಂಸ್ಥಾ ಕೊಂಗ್ರೆಸ್ ಸಮಿತಿ ಆಶ್ರಯದಲ್ಲಿ ಸಮಾವೇಶಗೊಂಡ ಜಿಲ್ಲಾ ರಾಜಕೀಯ ಪರಿಷತ್ತಿನಲ್ಲಿ, ಸಂಸ್ಥಾ ಕೊಂಗ್ರೆಸ್ ನಾಯಕರು ಜನತೆಗೆ ಕರೆನೀಡಿದರು. ಸರ್ವಶ್ರೀ ಎಸ್. ನಿಜಲಿಂಗಪ್ಪ, ವೀರೇಂದ ಪಾಟೀಲ್, ರಾಮಕೃಷ್ಣ ಹಗ್ಡೆ, ಸಿ. ಎಂ. ಇಬ್ರಾಹಿಂ, ಎಂ. ಶ್ರೀನಿವಾಸ ಮೊದಲಾದ ಸಂಸ್ಥಾ ಕೊಂಗ್ರೆಸ್ ಪ್ರಮುಖರು ಇದರಲ್ಲಿ ಭಾಗವಹಿಸಿದ್ದರು. ಶ್ರೀ। ನಿಜಲಿಂಗಪ್ಪನವರು ಪರಿಷತ್ತನ್ನು ಉದ್ಘಾಟಿಸಿದರು. ಶ್ರೀ। ರಾಮಕೃಷ್ಣ ಹೆಗ್ಡೆಯವರು ಸಂಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸಿದರು. ಪ್ರದೇಶ ಯುವಕ ಸಂಚಾಲಕ ಶ್ರೀ। ಎಂ. ಶ್ರೀನಿವಾಸನವರು ಯುವಕ ಸಮ್ಮೇಲನವನ್ನು ಉದ್ಘಾಟಿಸಿದರು.

ಸಾಯಂಕಾಲ ನೆಹರೂ ಮೈದಾನಿನಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಮುಖಂಡರು, ಇಂದಿನ ಸರಕಾರದ ಆಡಳಿತದ ಕ್ಷನ ಸರ್ವಾಧಿಕಾರ ರೂಪ, ಭ್ರಷ್ಟಾಚಾರಗಳನ್ನು ಖಂಡಿಸಿ ಭಾಷಣ ಮಾಡಿದರು.

ರಾಜಕೀಯ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಶ್ರೀ। ವೀರೇಂದ್ರ ಪಾಟೀಲರು ವಹಿಸಿದ್ದರು. ——

ಮಂಗಳೂರು ನೊರ್ತ್ ರೋಟರಿಕ್ಲಬ್

ಮೇಲಿನ ಕ್ಲಬ್ಬಿನ ಸಾಪ್ತಾಹಿಕ ಸಭೆಯು ಹಿಂದೀ ಪ್ರಚಾರ ಸಮಿತಿಯ ಭವನದಲ್ಲಿ ತಾ. 3ರಂದು ಜರಗಿದಾಗ ಮಂಗಳೂರು ರೋಶನಿ ನಿಲಯದ ಪ್ರೊ। ಜಿ. ಆರ್. ಕೃಷ್ಣ ಎಂ. ಎ. (ಲಿಟ್.) ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ, "ಸಾಮಾಜಿಕ ಬದಲಾವಣೆಗಾಗಿ ಶಿಕ್ಷಣ" ಎಂಬ ವಿಷಯದ ಕುರಿತು ಉಪನ್ಯಾಸವಿತ್ತರು. ಆರಂಭದಲ್ಲಿ ರೊಟೇರಿಯನ್ ರವಿರಾಜರಿಂದ ಪ್ರಾರ್ಥನೆ, ಅಧ್ಯಕ್ಷ ಎಂ. ವಿ. ಭಂಡಾರ್ಕಾರರಿಂದ ಸ್ವಾಗತವಾದ ಮೇಲೆ ರೋ। ಯು. ಡಿ. ನಾಯ್ಕರು ಮುಖ್ಯ ಅತಿಥಿಯವರ ಪರಿಚಯ ಮಾಡಿಕೊಟ್ಟರು. ಕೊನೆಯಲ್ಲಿ ರೋ। ಸಿ. ವಿ. ಸಲ್ಡಾನಾರವರು ಧನ್ಯವಾದಗಳನ್ನರ್ಪಿಸಿದರು.

ಜಿಲ್ಲೆಯಲ್ಲಿ "ಸುರ್‌ಸಾಗರ" ಸಂಗೀತ ಸಮ್ಮೇಳನ

ಮಂಗಳೂರು ಸಂಗೀತ ಕಲಾ ಪ್ರಸಾರಕ ಸಂಘದ ಆಶ್ರಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕಲಾ ಇತಿಹಾಸದಲ್ಲೇ ಮೊದಲ ಬಾರಿಗೆ, ಮುಂದಿನ ಮಾರ್ಚ್ ತಿಂಗಳಲ್ಲಿ ಮೂರು ದಿನಗಳ ಕಾಲ ಸುರ್‌ಸಾಗರ್ ಸಂಗೀತ ಸಮ್ಮೇಳನ ನಡೆಯಲಿದೆ. ಈ ಸಮ್ಮೇಳನದಲ್ಲಿ ಅಖಿಲ ಭಾರತ ಖ್ಯಾತಿಯ ಅನೇಕ ಮಂದಿ ರೇಡಿಯೋ ಗಾಯಕರು ಹಾಗು ಸಂಗೀತ ವಿದುಷಿಗಳು ಭಾಗವಹಿಸಲಿರುವರು. ಸಮ್ಮೇಳನವು ಮಾರ್ಚ್ 14, 15 ಮತ್ತು 16ರಲ್ಲಿ ನಡೆಯುವುದು, ಜಿಲ್ಲೆಯವರೇ ಆದ ಅಂತರ್ರಾಷ್ಟ್ರೀಯ ಖ್ಯಾತಿಯ ತಬಲಾವಾದನ ಪಟು ಪಂಡಿತ ತಾರಾನಾಥರನ್ನು ಅವರ ಷಷ್ಟ್ಯಬ್ದಿ ಸಂಬಂಧ ಈ ಸಮ್ಮೇಳನದಲ್ಲಿ ಸನ್ಮಾನಿಸಲಾಗುವುದೆಂದೂ ತಿಳಿದು ಬಂದಿದೆ.

ಜಿಲ್ಲೆಯಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆ

ಈಗಾಗಲೇ ಕೇಂದ್ರದಿಂದ ಕೈಗಾರಿಕಾ ಲೈಸನ್ಸ್ ದೊರೆತಿರುವ ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ ಯೋಜನೆ ಸಂಬಂಧವಾದ ವಿವರಗಳನ್ನು ಸಂಸ್ಥೆಯ ಚೀಫ್ ಪ್ರೊಮೋಟರ್ ಶ್ರೀ। ಬಂಟ್ವಾಳ ನಾರಾಯಣ ನಾಯಕ್ ಎಂ. ಎಲ್. ಎ. ಅವರು ತಾ. 4ರಂದು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನಲ್ಲಿ ಜರಿಯಲಾದ ಪತ್ರಿಕಾ ಪರಿಷತ್ತಿನಲ್ಲಿ ವಿವರಿಸಿದರು. ಇದೀಗ ಯೋಜನೆಗೆ 7ಲಕ್ಷ ರೂಪಾಯಿ ಪಾಲುಬಂಡವಾಳ ಸಂಗ್ರಹವಾಗಿದ್ದು 1975 ಮಾರ್ಚ್ 31ರೊಳಗಾಗಿ ಒಟ್ಟು ನಿಶ್ಚೈಸಿರುವ 40ಲಕ್ಷ ರೂಪಾಯಿ ಸಂಗ್ರಹಿಸುವ ಗುರಿ ಇಟ್ಟುಕೊಳ್ಳಲಾಗಿದೆಯೆಂದು ಅವರು ತಿಳಿಸಿರುವರು. ಆರು ಕೋಟಿ ರೂಪಾಯಿ ವೆಚ್ಚದ ಈ ಬೃಹತ್ ಯೋಜನೆಗೆ ರಾಜ್ಯ ಸರಕಾರ 90ಲಕ್ಷ ರೂಪಾಯಿ ಮತ್ತು ಯಂತ್ರೋಪಕರಣ, ಕಟ್ಟಡಗಳಿಗೆ ಅವಶ್ಯವಿರುವ ಹಣವನ್ನು ಕೇಂದ್ರ ಕೈಗಾರಿಕಾ ಆರ್ಥಿಕ ಕೊರ್ಪೊರೇಶನ್ ಮತ್ತು ಜೀವವಿಮಾ ಸಂಸ್ಥೆಗಳು ಕೊಡಲೊಪ್ಪಿದುದನ್ನೂ ಅವರು ತಿಳಿಸಿದರು. ಸಕ್ಕರೆ ಕಾರ್ಖಾನೆ ಆರಂಭವಾಗುವುದರೊಡನೆ 500ರಿಂದ 1000 ಮಂದಿಗೆ ಕಾರ್ಖಾನೆಯಲ್ಲೇ ಸುಮಾರು 7000 ಕುಟುಂಬಗಳಿಗೆ ಇತರ ರೀತಿಯಲ್ಲಿ ಉದ್ಯೋಗಾವಕಾಶ ದೊರೆಯುವುದೆಂದೂ ಹೇಳಿದ ಶ್ರೀ। ನಾಯ್ಕರು ಯೋಜನೆಗೆ ಎಲ್ಲರ ಸಹಕಾರ ಹಾರೈಸಿದರು. ಪಾಲುಬಂಡವಾಳ ಸಂಗ್ರಹ ಕಾರ್ಯ ತೀವ್ರಗೊಳಿಸುವರೆ ಶ್ರೀ। ನಾಯ್ಕರು ತಾ. 5ರಿಂದ ಜಿಲ್ಲಾ ಸಂಚಾರ ಕೈಕೊಂಡಿರುವರು.

ಕ್ರೀಡಾ ಸ್ಪರ್ಧೆಗೆ ಆಯ್ಕೆ

ದಕ್ಷಿಣ ಕನ್ನಡ ಎಮೆಚ್ಯೂರ್ ಎಥ್ಲೆಟಿಕ್ ಎಸೋಸಿಯೇಶನ್ ಹಾಗು ಜಿಲ್ಲಾ ಯುವಜನ ಮಂಡಲಿಯ ವತಿಯಿಂದ ಇದೇ ತಿಂಗಳ ತಾ. 13 ಮತ್ತು 14ರಲ್ಲಿ ಮಂಗಳೂರಿನ ನೆಹರೂ ಮೈದಾನಿನಲ್ಲಿ ಬೆಂಗಳೂರಲ್ಲಿ ಜರಗುವ ರಾಜ್ಯಮಟ್ಟದ ಆಟೋಟ ಸ್ಪರ್ಧೆಯಲ್ಲಿ ಭಾಗವಹಿಸುವವರ ಅರ್ಹತೆಯ ಆಯ್ಕೆಗಾಗಿ ಜಿಲ್ಲಾ ಮಟ್ಟದ ಸ್ಪರ್ಧೆಗಳನ್ನು ಜರಗಿಸಲಾಗುವುದು.

ಜಿಲ್ಲೆಗೆ ಅಕ್ಕಿ

ಹೊರ ಜಿಲ್ಲೆಗಳಿಂದ ಅಕ್ಕಿ ತರಲು ದಕ್ಷಿಣ ಕನ್ನಡ ಜಿಲ್ಲೆಯ ಸಹಕಾರ ಸಂಘಗಳಿಗೆ ಪರ್ಮಿಟ್ ನೀಡುವ ಬಗ್ಗೆ ಆಹಾರ ಸಚಿವೆ ಶ್ರೀಮತಿ ಇ. ಇ. ವಾಜ್ ಭರವಸೆ ನೀಡಿದ್ದಾರೆಂದು ಶಾಸಕ ಶ್ರೀ। ಭಾಸ್ಕರ ಶೆಟ್ಟಿರ ಮೂಲಕ ತಿಳಿದುಬರುತ್ತದೆ.

VIJAYA BANK LIMITED

REGD OFFICE:
LIGHT HOUSE HILL ROAD,
MANGALORE—3.

NOTICE

Notice having been given of the loss of Share Certificates Nos. 2317, 2823, 3431 and 5308 for 20 shares, 20 shares, 13 shares and 13 shares, numbered 48240 to 48259, 57838 to 57857, 70845 to 70857 and 110798 to 110810 respectively, of Rs. 25/- each, issued by the Bank to Sri G. Hirianna Shetty, N/o Sri Nagappa Bhandary, Doddamane, Gulvadi Village and Post, Coondapoor Taluk, fresh Share Certificates will be issued in lieu thereof for the purpose of transfer of the said shares, unless objection is lodged with us within 30 days from this date.

Mangalore
Date:
4-12 1974

(Sd.) *M. V. Bhat*,
Special officer.

ಜನರಲ್ ಇಂಡಸ್ಟ್ರೀಸ್ ಉದ್ಘಾಟನೆ

ಬಾಳಿಗಾ ಎಂಟರ್ ಪ್ರೈಸಸ್ ಆಶ್ರಯದಲ್ಲಿ ಉಡುಪಿಯ ಚಿಟ್ಪಾಡಿಯಲ್ಲಿ ರೂಪುಗೊಂಡ ಜನರಲ್ ಇಂಡಸ್ಟ್ರೀಸ್ ಕೈಗಾರಿಕಾ ಸಂಸ್ಥೆಯ ಉದ್ಘಾಟನೆ ತಾ. 1ರಂದು ರಾಜ್ಯದ ಸಣ್ಣ ಉದ್ಯಮ ಸಚಿವ ಶ್ರೀ। ವೀರಪ್ಪ ಮೊಯ್ಲಿಯವರಿಂದ ನಡೆಯಿತು. ತಾಲೂಕು ಬೋರ್ಡು ಅಧ್ಯಕ್ಷ ಶ್ರೀ। ಎಂ. ಮಧ್ವರಾಜರು ಅಧ್ಯಕ್ಷತೆ ವಹಿಸಿದ್ದು, ಶಿಶುಕಲ್ಯಾಣ ಸಚಿವೆ ಶ್ರೀಮತಿ ಮನೋರಮಾ ಮಧ್ವರಾಜರು ಮುಖ್ಯ ಅತಿಥಿಯಾಗಿ ಸಮಾರಂಭದಲ್ಲಿ ಭಾಗವಹಿಸಿದ್ದರು.

ಮೀನುಗಾರರ ಪರಿಷತ್ತು

ಅಖಿಲ ಕರ್ನಾಟಕ ಮೀನುಗಾರರ ಪರಿಷತ್ತು ಇದೇ ತಿಂಗಳ ತಾ. 12ರಂದು ಕಾರವಾರದಲ್ಲಿ ನಡೆಯಲಿದೆ. ಕರ್ನಾಟಕದ ಮುಖ್ಯ ಮಂತ್ರಿ ಶ್ರೀ। ದೇವರಾಜ್ ಅರಸ್ ಪರಿಷತ್ತನ್ನು ಉದ್ಘಾಟಿಸಲಿದ್ದು ಮೀನುಗಾರಿಕಾ ಸಚಿವ ಶ್ರೀ। ರಾಥೋಡ್ ಅಧ್ಯಕ್ಷತೆ ವಹಿಸಲಿರುವರು. ಮೀನುಗಾರಿಕಾ ವಸ್ತುಪ್ರದರ್ಶನವನ್ನು ಕಾರ್ಮಿಕ ಸಚಿವ ಶ್ರೀ। ಎಸ್. ಎಂ. ಯಾಹ್ಯಾ ಉದ್ಘಾಟಿಸುವರು. ಶಿಶುಕಲ್ಯಾಣ ಸಚಿವೆ ಶ್ರೀಮತಿ ಮನೋರಮಾ ಮಧ್ವರಾಜ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸುವರು.

PRABHAT, KANNADA WEEKLY, MANGALORE-575001
REGD. No. KRNL-8.

To

Printed at The Prabhat Printers, Ltd., Mangalore. Edited and Published by K. V. Shenoy at Prabhat Office, Car Street, Mangalore-1.